ಈ ಲೇಖನದ ವಿಷಯಾನುಕ್ರಮಣಿಕೆ


ವಿಲಂಬಿ ಮಾರ್ಗಶೀರ್ಷ ಶುದ್ಧ ಏಕಾದಶಿ ವಿವರ 2

17ರ ರಾತ್ರಿ ಭೋಜನ ಮಾಡಬಹುದು 2

18ರಂದು ಸರ್ವಥಾ ಉಪವಾಸಮಾಡಬಾರದು 3

18ರಂದು ಉಪವಾಸ ಮಾಡಿದರೆ ಸಂತತಿ ನಾಶ 5

18 ರ ರಾತ್ರಿ ಹರಿವಾಸರ 8

ವಿದ್ಧದಶಮೀ ಶ್ರಾದ್ಧ ಮಾಡಬಹುದು 9

19ರಂದು ವೈಕುಂಠೈಕಾದಶೀ, ಉಪವಾಸ 12

20 ರಂದು ಪಾರಣೆ 13

# ವಿಶ್ವನಂದಿನಿ ಲೇಖನಮಾಲೆ – 273

## ವಿಲಂಬಿ ಮಾರ್ಗಶೀರ್ಷ ಶುದ್ಧ ಏಕಾದಶಿ ವಿವರ

## 17ರ ರಾತ್ರಿ ಭೋಜನ ಮಾಡಬಹುದು

ಸೋಮವಾರ
17-12-2018

ದಶಮೀ ತಿಥಿ
ಆದರೆ ದಶಮೀ ಆಚರಣೆಯಿಲ್ಲ.
ರಾತ್ರಿ ಊಟ ಮಾಡಬಹುದು.

ಮಾರ್ಗಶೀರ್ಷ ಶುಕ್ಲ ದಶಮೀ ಮೃತರಾದವರ ಶ್ರಾದ್ಧವನ್ನು ಇಂದು ಆಚರಿಸಬೇಕು.

ಇಂದಿನಿಂದ ಧನುರ್ಮಾಸದ ಪೂಜೆ ಆರಂಭ.

## 18ರಂದು ಸರ್ವಥಾ ಉಪವಾಸಮಾಡಬಾರದು

ಮಂಗಳವಾರ
18-12-2018
ಏಕಾದಶೀ ತಿಥಿ. ಉಪವಾಸವಿಲ್ಲ.

ಈ ದಿನದ ಎಲ್ಲ ಸಂಕಲ್ಪಗಳಲ್ಲಿಯೂ ಏಕಾದಶ್ಯಾಂ ತಿಥೌ ಎಂದು ಹೇಳಬೇಕು. ಆದರೆ ಏಕಾದಶಿಗೆ ದಶಮೀ ವೇಧವಿರುವದರಿಂದ ದಶಮೀಆಚರಣೆ.

ಈ ಬಾರಿಯ ದಶಮೀವೇಧ ಅತ್ಯಂತ ಸೂಕ್ಷ್ಮವಾಗಿದೆ. ಕೆಲವರು ವೇಧವಿಲ್ಲವೆಂದೂ, ಕೆಲವರು ವೇಧ ಇದೆ ಎಂದೂ, ಕೆಲವರು ಒಂದು ಕಡೆಯಲ್ಲಿದೆ ಮತ್ತೊಂದು ಕಡೆಯಲ್ಲಿಲ್ಲ ಎಂದೂ ಹೇಳುತ್ತಿದ್ದಾರೆ. ಆದರೆ ಇವತ್ತಿಗೆ ಉಪಲಬ್ಧವಿರುವ ನಾಲ್ಕು ಲೆಕ್ಕಾಚಾರಗಳಲ್ಲಿ ಮೂರು ಲೆಕ್ಕಾಚಾರಗಳ ಪ್ರಕಾರ ದಶಮೀವೇಧವಿದೆ. ಒಂದು ಲೆಕ್ಕಾಚಾರದ ಪ್ರಕಾರ ಎರಡು ನಿಮಿಷದ ಅಂತರದಲ್ಲಿ ದಶಮೀವೇಧವಿಲ್ಲ. ಗಣಿತದಲ್ಲಿ ಸ್ವಲ್ಪ ತಪ್ಪಾದರೂ ವಿದ್ಧವಾಗಿರುವದು ನಿಶ್ಚಿತ. ದಶಮೀವೇಧದ

ಸಂಶಯ ಬಂದರೂ, ವೇಧದ ವಿಷಯದಲ್ಲಿ ವಿದ್ವಾಂಸರದಲ್ಲಿ ಮತಭೇದವಿದ್ದರೂ  ಆ ದಿವಸ ಉಪವಾಸವನ್ನು ಮಾಡಬಾರದು, ದ್ವಾದಶಿಯಂದೇ ಉಪವಾಸ ಮಾಡಬೇಕು ಎನ್ನುವದು ಶ್ರೀಮದಾಚಾರ್ಯರ ನಿರ್ಣಯ.

**ಬಹ್ವಾಗಮವಿರೋಧೇಷು**
**ಬ್ರಾಹ್ಮಣೇಷು ವಿವಾದಿಷು**
**ಉಪೋಷ್ಯಾ ದ್ವಾದಶೀ ಪುಣ್ಯಾ**
**ತ್ರಯೋದಶ್ಯಾಂ ತು ಪಾರಣಮ್** ಎಂದು.

ಶಾಸ್ತ್ರೀಯ ಲೆಕ್ಕಾಚಾರಗಳಲ್ಲಿ ವಿರೋಧ ಕಂಡು ಬಂದಾಗ, ವಿದ್ವಾಂಸರಲ್ಲಿ ಐಕಮತ್ಯ ಇಲ್ಲದಾಗ ಆ ದಶಮಿಯಂದು ಉಪವಾಸ ಮಾಡಬೇಡಿ, ದ್ವಾದಶಿಯಂದೇ ಉಪವಾಸ ಮಾಡಿ ಎಂಬ ಆಚಾರ್ಯರ ವಚನ ಈ ಬಾರಿಯ ಉಪವಾಸಕ್ಕೆ ಮಾರ್ಗದರ್ಶಕ.

## 18ರಂದು ಉಪವಾಸ ಮಾಡಿದರೆ ಸಂತತಿ ನಾಶ

ದಶಮೀವಿದ್ಧವಾಗಿರುವ ಏಕಾದಶಿಯಂದು ಉಪವಾಸ ಮಾಡಿದರೆ ಸಂತತಿ ವಿನಾಶವಾಗುತ್ತದೆ, ಗಾಂಧಾರಿಯು ಇದೇ ರೀತಿಯ ಉಪವಾಸ ಮಾಡಿ ತನ್ನ ನೂರು ಜನ ಮಕ್ಕಳ ಸಾವಿನ ದುಃಖವನ್ನು ಅನುಭವಿಸಿದಳು ಎಂದು ಆಚಾರ್ಯರು ಕೃಷ್ಣಾಮೃತಮಹಾರ್ಣವದಲ್ಲಿ ತಿಳಿಸಿದ್ದಾರೆ.

**ದಶಮೀಶೇಷಸಂಯುಕ್ತಾ**
**ಗಾಂಧಾರ್ಯಾ ಸಮುಪೋಷಿತಾ**
**ತಸ್ಯಾಃ ಪುತ್ರಶತಂ ನಷ್ಟಂ**
**ತಸ್ಮಾತ್ ತಾಂ ಪರಿವರ್ಜಯೇತ್**

**ಅಪೀಷದ್ ದಶಮೀವಿದ್ಧಾ**
**ತದಾ ತಾಂ ಪರಿವರ್ಜಯೇತ್**
**ಸುರಾಬಿಂದುಸಮಾಯುಕ್ತಾಂ**
**ಪ್ರವದಂತಿ ಮನೀಷಿಣಃ**

“ದಶಮಿಯ ಸಂಪರ್ಕ ಅತೀಸ್ವಲ್ಪವೇ ಇರಬಹುದು. ಆದರೂ ಸುರೆಯಿಂದ ಕೂಡಿದ ಗಂಗಾನೀರನ್ನು ಪರಿತ್ಯಾಗ ಮಾಡುವಂತೆ ಅದನ್ನು ತ್ಯಾಗ ಮಾಡಬೇಕು ಎಂದು ತಿಳಿದವರು ಹೇಳುತ್ತಾರೆ”

ಹೀಗಾಗಿ ಸರ್ವಥಾ ಸಂಶಯವಿರುವ 18-12-2018 ರಂದು ಉಪವಾಸ ಮಾಡತಕ್ಕದ್ದಲ್ಲ. ಅದರಲ್ಲಿಯೂ ಮಕ್ಕಳ ಏಳಿಗೆಯನ್ನು ಬಯಸುವವರು, ಮಕ್ಕಳನ್ನು ಪಡೆಯ ಬೇಕಾದದವರು ಸರ್ವಥಾ 18ನೆಯ ತಾರೀಕು ಉಪವಾಸ ಮಾಡಬಾರದು. 19ರಂದೇ ಉಪವಾಸ. 20ರಂದು ಪಾರಣೆ.

ವಿದ್ಧೈಕಾದಶಿಯನ್ನು ಬಿಟ್ಟು ದ್ವಾದಶಿಯಂದು ಉಪವಾಸ ಮಾಡುವದರಿಂದ ಸಂತತಿ, ಸಂಪತ್ತು, ಅಧಿಕಾರಗಳ ಅಭಿವೃದ್ಧಿಯಾಗುತ್ತದೆ, ನೂರು ಕ್ರತುಗಳ ಪುಣ್ಯ ಒದಗುತ್ತದೆ ಎಂದು ಸ್ವಯಂ ಆಚಾರ್ಯರೇ ತಿಳಿಸುತ್ತಾರೆ —

**ಪುತ್ರರಾಜ್ಯವಿವೃದ್ಧ್ಯರ್ಥಂ**
**ದ್ವಾದಶ್ಯಾಮುಪವಾಸನಮ್**
**ತತ್ರ ಕ್ರತುಶತಂ ಪುಣ್ಯಂ**
**ತ್ರಯೋದಶ್ಯಾಂ ತು ಪಾರಣಮ್**

ಇನ್ನು, ಕೆಲವರು ವಾದ ಮಾಡಬಹುದು — ನಿಮಗೆ ದಶಮೀವೇಧದ ಸಂಶಯವಿದೆ. ನಮಗೆ ಇಲ್ಲ ನಾವು ಉಪವಾಸ ಮಾಡುತ್ತೇವೆ ಎಂದು. ಆಚಾರ್ಯರ ಸ್ಪಷ್ಟ ನಿರ್ಣಯವಿದೆ – ಬ್ರಾಹ್ಮಣರಲ್ಲಿ ವಿವಾದ ತಲೆದೋರಿದಾಗ ಆ ಏಕಾದಶಿಯಂದು ಸರ್ವಥಾ ಉಪವಾಸ ಮಾಡಬಾರದು ಎಂದು. ಇಬ್ಬರಿಗೆ ವಿರುದ್ಧ ನಿರ್ಣಯವಿದ್ದಾಗಲೇ ವಿವಾದ ಬರುವದು. ವಿವಾದ ಬಂದಾಗ ಏನು ಮಾಡಬೇಕು ಎಂದು ಆಚಾರ್ಯರು ತೋರಿದ್ದಾರೆ. ಆ ದಾರಿಯಲ್ಲಿ ನಾವು ನಡೆಯಬೇಕು.

## 18 ರ ರಾತ್ರಿ ಹರಿವಾಸರ

18-12-2018 ರ ರಾತ್ರಿ 9:55 ರ ಒಳಗೆ ಫಲಾಹಾರವನ್ನು ಮುಗಿಸಬೇಕು.
09:55 ರ ನಂತರ ಹರಿವಾಸರ. ನೀರನ್ನೂ ಸಹ ಕುಡಿಯಬಾರದು.

ಹರಿವಾಸರದ ಸಮಯದಲ್ಲಿ ಸರ್ವಥಾ ತಿನ್ನಬಾರದು ಕುಡಿಯಬಾರದು ಎಂದು **"ನ ಭೋಕ್ತವ್ಯಂ ನ ಭೋಕ್ತವ್ಯಂ ಸಂಪ್ರಾಪ್ತೇ ಹರಿವಾಸರೇ"** ಎಂದು ಆಚಾರ್ಯರು ಕೃಷ್ಣಾಮೃತಮಹಾರ್ಣವದಲ್ಲಿ ತಿಳಿಸಿದ್ದಾರೆ.

ಹರಿವಾಸರ ಎಂದರೇನು ಎನ್ನುವದನ್ನು VNP021 ರಲ್ಲಿ ತಿಳಿಸಿದ್ದೇನೆ. ಕೆಳಗಿನ ಲಿಂಕನ್ನು ಒತ್ತಿದರೆ ಆ ಪುಟ ತೆರೆದುಕೊಳ್ಳುತ್ತದೆ.

http://vishwanandini.com/fullprashnottara.php?serialnumber=VNP021

## ವಿದ್ಧದಶಮೀ ಶ್ರಾದ್ಧ ಮಾಡಬಹುದು

ಮಾರ್ಗಶೀರ್ಷ ಏಕಾದಶಿ ಮೃತರಾದವರ ಶ್ರಾದ್ಧವನ್ನು ಇಂದು ಮಾಡಬೇಕು.

ಕೆಲವರು "ವಿದ್ಧೈಕಾದಶಿಯಂದೂ ಶ್ರಾದ್ಧವನ್ನು ಆಚರಿಸಬಾರದು, ಏಕಾದಶಿ ಶ್ರಾದ್ದವನ್ನು ದ್ವಾದಶಿಯಂದೇ ಆಚರಿಸಬೇಕು" ಎಂದು ಮುದ್ರಿಸುತ್ತಾರೆ. ಅದು ಶಾಸ್ತ್ರದ ನಿರ್ಣಯಗಳಿಗೆ ವಿರುದ್ಧವಾದದ್ದು.  ಏಕಾದಶಿ ವಿದ್ಧವಾಗಿದ್ದಾಗ, ಏಕಾದಶೀ ಶ್ರಾದ್ಧವನ್ನು ಅಂದೇ ಮಾಡಬೇಕು ಸ್ಪಷ್ಟವಾಗಿ ಶಾಸ್ತ್ರ ನಿರ್ಣಯಿಸುತ್ತದೆ.

**ಏಕಾದಶ್ಯಾಂ ತು ವಿದ್ಧಾಯಾಂ**
**ದಶಮೀಕಲಯಾ ಯದಿ ।**
**ತದಾ ನೈವ ತ್ಯಜೇತ್ ಶ್ರಾದ್ಧಂ**
**ಅನ್ಯಥಾ ನಿಷ್ಫಲಂ ಭವೇತ್ ।।**

ಏಕಾದಶಿ ವಿದ್ದವಾಗಿದ್ದಾಗ ಏಕಾದಶಿಶ್ರಾದ್ಧವನ್ನು ಸರ್ವಥಾ ಬಿಡಬಾರದು. ವಿದ್ಧೈಕಾದಶಿಯಂದು ಏಕಾದಶಿ ಶ್ರಾದ್ಧವನ್ನು ಮಾಡದೆ, ದ್ವಾದಶಿಯಂದು

ಮಾಡಿದಲ್ಲಿ ಶ್ರಾದ್ಧ ನಿಷ್ಫಲವಾಗುತ್ತದೆ ಎಂದು ಗರುಡಪುರಾಣ ಅತ್ಯಂತ ಸ್ಪಷ್ಟವಾಗಿ ತಿಳಿಸುತ್ತದೆ.

ವಿಷ್ಣುರಹಸ್ಯದ ವಚನವೂ ಇದನ್ನು ಅನುಮೋದಿಸುತ್ತದೆ —

**ದಶಮೀಲೇಶಸಂಸ್ಪೃಷ್ಟಾ**
**ಯದಾ ಚೈಕಾದಶೀ ತಿಥಿಃ ।**
**ತಸ್ಯಾಂ ಬಲಿಕ್ರಿಯಾಃ ಸರ್ವಾಃ**
**ಪಿತುಃ ಶ್ರಾದ್ಧಂ ಸಮಾಚರೇತ್ ।।**

ವಿದ್ಧೈಕಾದಶಿಯಂದು ಬಲಿಹರಣ, ಅತಿಥಿಪೂಜೆ ಮುಂತಾದ ಎಲ್ಲ ಕ್ರಿಯೆಗಳನ್ನು ಮಾಡಬೇಕು. ಶ್ರಾದ್ಧವನ್ನೂ ಅವಶ್ಯವಾಗಿ ಆಚರಿಸಬೇಕು.

ಬ್ರಹ್ಮವೈವರ್ತ ಪುರಾಣವೂ ಈ ಮಾತನ್ನು ಸ್ಪಷ್ಟಪಡಿಸುತ್ತದೆ —

**ಏಕಾದಶ್ಯಾಂ ತು ವಿದ್ಧಾಯಾಂ**
**ದೇವರ್ಷಿಪಿತೃತರ್ಪಣಮ್ ।**
**ಶ್ರಾದ್ಧದಾನಾದಿಕಂ ವೈಶ್ವ-**
**ದೇವಂ ಕರ್ಮ ಸಮಾಚರೇತ್ ।।**

ವಿದ್ಧೈಕಾದಶಿಯಂದು, ದೇವ, ಋಷಿ, ಪಿತೃತರ್ಪಣಗಳು, ಶ್ರಾದ್ಧ, ಅನ್ನದಾನಾದಿ ದಾನಗಳು, ವೈಶ್ವದೇವ ಎಲ್ಲವನ್ನೂ ಅವಶ್ಯವಾಗಿ ಆಚರಿಸಬೇಕು.

ಏಕಾದಶಿ ಶ್ರಾದ್ಧವನ್ನು ದ್ವಾದಶಿಯಂದು ಆಚರಿಸಬೇಕು ಎಂಬ ವಚನ, ಏಕಾದಶಿಯಂದೇ ಉಪವಾಸವಿದ್ದಾಗ ಮಾತ್ರ ಸಂಬಂಧಪಟ್ಟದ್ದು ಶ್ರೀ ಶ್ರೀಮುಷ್ಣಂ ಆಚಾರ್ಯರು ನಿರ್ಣಯಿಸಿದ್ದಾರೆ.

## 19ರಂದು ವೈಕುಂಠೈಕಾದಶೀ, ಉಪವಾಸ

ಬುಧವಾರ. 19-12-2018

ದ್ವಾದಶೀ ತಿಥಿ.

ಈ ದಿನದ ಎಲ್ಲ ಸಂಕಲ್ಪಗಳಲ್ಲಿಯೂ ದ್ವಾದಶ್ಯಾಂ ತಿಥೌ ಎಂದು ಹೇಳಬೇಕು.
ಪೂರ್ಣ ಉಪವಾಸ.

ಬೆಳಿಗ್ಗೆ ಎದ್ದು ಪೂಜೆಯ ನಂತರ **"ಗುರ್ವಂತರ್ಗತ, ಮಧ್ವಾಂತರ್ಗತ ಶ್ರೀಹರೇ ನಿನ್ನ ಪ್ರೀತ್ಯರ್ಥವಾಗಿ ಉಪವಾಸ ಮಾಡುತ್ತಿದ್ದೇನೆ"** ಎಂದು ಉಪವಾಸದ ಸಂಕಲ್ಪವನ್ನು ಮಾಡಬೇಕು. ಸಂಕಲ್ಪವಿಲ್ಲದ ಉಪವಾಸ ಫಲಪ್ರದವಾಗುವದಿಲ್ಲ.

ಈ ದಿವಸ ವೈಕುಂಠೈಕಾದಶಿ ಗೀತಾಜಯಂತೀ ಎರಡೂ ಮೇಳೈಸಿವೆ. ಮಹತ್ತರ ಪರ್ವಕಾಲವಾದ ಇಂದು ಗೀತಾ ವಿಷ್ಣುಸಹಸ್ರನಾಮಗಳ ಪಠಣದಿಂದ ಮಹತ್ತರ ಸಾಧನೆಯನ್ನು ಮಾಡಿಕೊಳ್ಳತಕ್ಕದ್ದು. **ಭೋಜನವಿಲ್ಲದ ಕಾರಣ ಇಂದು ಶ್ರಾದ್ಧದ ಆಚರಣೆ ಇಲ್ಲ.**

## 20 ರಂದು ಪಾರಣೆ

ಗುರುವಾರ

20-12-2018

ತ್ರಯೋದಶೀ ತಿಥಿ.

ಎಲ್ಲ ಸಂಕಲ್ಪಗಳಲ್ಲಿಯೂ ತ್ರಯೋದಶ್ಯಾಂ ತಿಥೌ ಎಂದು ಹೇಳಬೇಕು.

ದಶಮೀ ಹರಿವಾಸರವಿದ್ದರೆ ದ್ವಾದಶಿ ಹರಿವಾಸರವಿರುವದಿಲ್ಲ.
ಸೂರ್ಯೋದಯದ ನಂತರ ನೈವೇದ್ಯ, ಹಸ್ತೋದಕ, ಪಾರಣೆ.

ಮಾರ್ಗಶೀರ್ಷ ಶುಕ್ಲ ದ್ವಾದಶಿ ಮತ್ತು ತ್ರಯೋದಶಿ ಮೃತರಾದವರ ಶ್ರಾದ್ಧ ಇಂದು ಮಾಡಬೇಕು.

ಪಾರಣೆ ಮುಗಿದ ಬಳಿಕ “ಗುರ್ವಂತರ್ಗತ, ಮಧ್ವಾಂತರ್ಗತ ಶ್ರೀಹರೇ ನಿನ್ನ ಪ್ರೀತ್ಯರ್ಥವಾಗಿ ಉಪವಾಸ, ಪಾರಣೆಗಳನ್ನು ಮಾಡಿದ್ದೇನೆ,

ಪ್ರೀತನಾಗು” ಎಂದು ಉಪವಾಸದ ಸಮರ್ಪಣೆಯನ್ನು ಮಾಡಬೇಕು. ಸಮರ್ಪಣೆಯಾಗದ ಕರ್ಮಗಳು ಫಲ ನೀಡುವದಿಲ್ಲ.

ಹೀಗಾಗಿ ಈ ದಿನತ್ರಯದ ವ್ರತವನ್ನು ಸಂಕಲ್ಪದೊಂದಿಗೆ ಆರಂಭಿಸಬೇಕು. ದೇವರು ಮಾಡಿಸುತ್ತಿದ್ದಾನೆ ಎಂಬ ಅನುಸಂಧಾನವಿರಬೇಕು. ಅವನ ಚರಣಕಮಲಗಳಿಗೆ ಸಮರ್ಪಿಸಬೇಕು.

ಎಲ್ಲ ಸಜ್ಜನರಿಗೂ ವೈಕುಂಠೈಕಾದಶೀ ಗೀತಾಜಯಂತಿಯ ಹಾರ್ದಿಕ ಶುಭಾಶಯಗಳು.

— ವಿಷ್ಣುದಾಸ ನಾಗೇಂದ್ರಾಚಾರ್ಯ

## ಶ್ರೀಮದ್ ಭಾಗವತ ಮಹಾ ಜ್ಞಾನ ಯಜ್ಞ

ಭಾಗವತ ಪ್ರವಚನ ಮಾಲಿಕೆಯಲ್ಲಿ ಒಟ್ಟು 182 ಪುಷ್ಪಗಳು ಸಮರ್ಪಿತವಾಗಿವೆ. ಮೊದಲನೆಯ ಸ್ಕಂಧದ ಪ್ರತೀಶ್ಲೋಕದ ಅರ್ಥಾನುಸಂಧಾನ ಮುಗಿದು ಎರಡನೆಯ ಸ್ಕಂಧದಲ್ಲಿ ಪುರುಷಸೂಕ್ತಕ್ಕೆ ಬ್ರಹ್ಮದೇವರು ಮಾಡಿದ ವ್ಯಾಖ್ಯಾನದ ವಿವರಣೆ ನಡೆಯುತ್ತಿದೆ. ತಪ್ಪದೇ ಆಲಿಸಿ.

ಭಾಗವತದ ಉಪನ್ಯಾಸಗಳು
ಇಲ್ಲಿ ದೊರೆಯುತ್ತವೆ —

http://vishwanandini.com/topicsInfo.php?id=85&page=U

http://vishwanandini.com/topicsInfo.php?id=74&page=U

## ಸಂಸ್ಕೃತ ಸುರಭಿ

ವಿಶ್ವನಂದಿನಿಯ ಜ್ಞಾನದೇಗುಲದಲ್ಲಿ ಸಂಸ್ಕೃತದ ಪಾಠಗಳು ಆರಂಭವಾಗಿವೆ.

ನಮ್ಮ ಜೀವದ ಭಾಷೆ, ದೇವತೆಗಳ ಭಾಷೆ, ಭಗವಂತನನ್ನು ತಿಳಿಸಿಕೊಡುವ ಶಾಸ್ತ್ರಗಳಿರುವ ಭಾಷೆ ಸಂಸ್ಕೃತ. ಅಂತಹ ಶ್ರೇಷ್ಠ ಭಾಷೆಯನ್ನು ಈಗ ಮನೆಯಲ್ಲಿಯೇ ಕುಳಿತು ಕಲಿಯಬಹುದು. ಯಾವುದೇ ಶುಲ್ಕ ತೆರಬೇಕಾಗಿಲ್ಲ.

ಬನ್ನಿ ಈ ವಿದ್ಯಾದಾನವನ್ನು ಸ್ವೀಕರಿಸಿ. ಎಲ್ಲ ಸಜ್ಜನರಿಗೂ ತಿಳಿಸಿ.

Link to download Vishwanandini

https://play.google.com/store/apps/details?id=com.v2.vishwanandini&hl=en